ಆ) ರೂಪಿಸಿದ್ದಲ್ಲಿ, ಅದರ ಬಗೆಗಿನ ವಿವರಗಳೇನು?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಆ) ಹೌದು.

ಅ) 1) ಭೂಮಿ-ರೈತರಿಗೆ ಅತಿ ಮುಖ್ಯವಾದ ಒಡೆತನ ದಾಖಲೆ ಪತ್ರದ (ಆರ್‌ಟಿಸಿ) ವನ್ನು ವಿಳಂಬವಿಲ್ಲದೆ ನೀಡುವ ಯೋಜನೆ ಇದಾಗಿದ್ದು, ಈಗಾಗಲೇ ಸಂಪೂರ್ಣವಾಗಿ ಕಾರ್ಯಗತಗೊಳಿಸಲಾಗಿರುತ್ತದೆ.

2. ರೈತ ಮಿತ್ರ ಕೇಂದ್ರ - ಈ ಯೋಜನೆಯಲ್ಲಿ 745 ಹೋಬಳಿಗಳಲ್ಲಿರುವ ರೈತ ಸಂಪರ್ಕ ಕೇಂದ್ರಗಳನ್ನು ಗಣಕೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಈಗಾಗಲೇ 117 ರೈತ ಸಂಪರ್ಕ ಕೇಂದ್ರಗಳು ಗಣಕೀಕೃತವಾಗಿದೆ. ಈ ಕೇಂದ್ರಗಳಲ್ಲಿ ರೈತರಿಗೆ ಬೇಕಾದ ಬೆಳೆಗಳ ಮಾಹಿತಿ, ಬೆಳೆಗಳ ವಿಧಾನಗಳು ಹಾಗೂ ಕೃಷಿ ಉತ್ಪನ್ನಗಳ ಮಾರುಕಟ್ಟೆ ಬೆಲೆಗಳ ವಿವರಗಳನ್ನು ರೈತರಿಗೆ ತ್ವರಿತವಾಗಿ ಸಿಗುವಂತೆ ಮಾಡಲಾಗಿದೆ. ಇತ್ಯಾದಿ.

3. ಯುವ.ಕಾಂ-ಮಾಹಿತಿ ತಂತ್ರಜ್ಞಾನದಲ್ಲಿ ಗ್ರಾಮೀಣ ವಿದ್ಯಾವಂತ ನಿರುದ್ಯೋಗಿ ಯುವಕ-ಯುವತಿಯರಿಗೆ ತರಬೇತಿ ನೀಡುವ ಉದ್ದೇಶದಿಂದ ಯುವ.ಕಾಂ. ಯೋಜನೆಯನ್ನು ಜಾರಿಗೆ ತಂದಿದ್ದು, ರಾಜ್ಯದ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ತಲಾ ಒಂದರಂತೆ ಯುವ.ಕಾಂ ಕೇಂದ್ರಗಳನ್ನು ತರೆಯಲಾಗುತ್ತಿದೆ.

ಮಂಡ್ಯದಲ್ಲಿ ಅಭಿವೃದ್ಧಿ ಕಾಮಗಾರಿಗಳು

179(662) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯದಲ್ಲಿನ ಹಳೆ ಎಂ.ಸಿ. ರಸ್ತೆಯನ್ನು ಕೆ.ಆರ್.ಡಿ.ಸಿ. ವತಿಯಿಂದ ಅಭಿವೃದ್ಧಿ ಗೊಳಿಸುವ ಕಾಮಗಾರಿಗೆ ಮಾನ್ಯ ಮುಖ್ಯಮಂತ್ರಿಗಳು ಶಂಕು ಸ್ಥಾಪನೆ ಮಾಡಿರುವುದನ್ನು ಸರಕಾರ ಅರಿತಿದೆಯೇ?

ಆ) ಹಾಗಿದ್ದಲ್ಲಿ, ಈ ಕಾಮಗಾರಿಗೆ ಯಾವುದೇ ಪೂರ್ವಭಾವಿ ಸಿದ್ಧತೆ ಇಲ್ಲದೇ ಶಂಕು ಸ್ಥಾಪನೆ ಮಾಡಲಾಗಿದೆಯೇ?

ಇ) ಈ ಕಾಮಗಾರಿ ಇನ್ನೂ ಪ್ರಾರಂಭವಾಗದಿರಲು ಕಾರಣವೇನು?

ಈ) ಈ ಕಾಮಗಾರಿಯ ವಿವರಗಳೇನು?

ಉ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹೌದು.

ಅ) ಯೋಜನೆಗೆ ಪೂರ್ವಭಾವಿ ಸಿದ್ಧತೆ ಮಾಡಲಾಗಿತ್ತು.

ಇ) ಯೋಜನೆಯ ವ್ಯಾಪ್ತಿ (ಸ್ಕೋಪ್) ಬದಲಾದ ಕಾರಣ ವಿಳಂಬವಾಗಿದೆ.

ಈ) ಈ ಯೋಜನೆಯಲ್ಲಿ ಈಗಿರುವ ರಸ್ತೆಯನ್ನು ಎರಡು ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ ಮತ್ತು ಈ ಕೆಳಕಂಡ ಕಾಮಗಾರಿಗಳನ್ನು ಒಳಗೊಂಡಿದೆ.

1. ರಸ್ತೆಯ ಹಳೆಯ ಮಣ್ಣನ್ನು ತೆಗೆದು ಹೊಸ ಮಣ್ಣಿನಿಂದ ರಸ್ತೆಯ ಮಟ್ಟವನ್ನು ಎತ್ತರಿಸಲು ಏರಿ ನಿರ್ಮಾಣ. (ಎಂಬ್ಯಾಂಕ್ ಮೆಂಟ್)

2. ಗ್ರೇಡ್ 2 ಮತ್ತು ಗ್ರೇಡ್ 3ರ ಜಲ್ಲಿಯನ್ನು ಹರಡುವುದು.

3. ಗಟ್ಟಿ ಮಾಡುವುದು (ಮೆಟಲಿಂಗ್)

4. ಮೆಟಲ್ ಮೈಲ್ಮೆಮೇಲೆ ಸರ್ಫೇಸ್ ಡ್ರೆಸ್ಸಿಂಗ್ (ಒಂದು ಪದರು)

5. 75 ಎಂ.ಎಂ. ದಪ್ಪದ ಬಿಟುಮಿನ್ ಮೆಕಾಡಮ್‌ನ ತಳ ಮತ್ತು ಬಂಧನಾಕಾರ ಪದರನ್ನು ಒಬೆಗಿಸುವುದು (ಬಿ.ಎಂ.)

6. 25 ಎಂ.ಎಂ. ದಪ್ಪದ ಅರೆ ಸಾಂದ್ರದ ಡಾಂಬರೀಕರಣ ಕಾಂಕ್ರೀಟ್ (ಎಸ್.ಡಿ.ಬಿ.ಸಿ) ಒದಗಿಸುವುದು.

7. ರಸ್ತೆಯ ಪೂರ್ತಿ ಉದ್ದಕ್ಕೂ ಚರಂಡಿಗಳನ್ನು ಮಾಡುವುದು.

ಉ) ಈ ಕಾಮಗಾರಿಯನ್ನು ಶೀಘ್ರದಲ್ಲಿಯೇ ತೆಗೆದುಕೊಳ್ಳಲು ಯೋಜಿಸಲಾಗಿದೆ.

ಮಂಡ್ಯ ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ

180(668) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ತಾಲ್ಲೂಕಿನ ತಾಲ್ಲೂಕು ಕಛೇರಿಗೆ ಹಾಗೂ ಇತರೇ ಇಲಾಖೆಗಳ ಕಚೇರಿಗೆ ಸೂಕ್ತ ಕಟ್ಟಡದ ಸೌಲಭ್ಯವಿಲ್ಲದೇ ಇರುವುದನ್ನು ಸರ್ಕಾರವು ಗಮನಿಸಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದ ವಿವಿಧ ಇಲಾಖೆಗಳ ಕಛೇರಿಗೆ ಮಿನಿ ವಿಧಾನಸೌಧದ ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹೌದು.

ಆ) ಹೌದು.

ಇ) ಮಂಡ್ಯ ನಗರದಲ್ಲಿದ್ದ ಹಳೇ ತಾಲ್ಲೂಕು ಕಛೇರಿ ಕಟ್ಟಡವನ್ನು ತೆಗೆದು ಹಾಕಿರುವ ನಿವೇಶನದಲ್ಲಿ ಮಿನಿ ವಿಧಾನ ಸೌಧ ಕಟ್ಟಡ ಕಟ್ಟಲು ಸೂಕ್ತ ಕ್ರಮಕೈಗೊಳ್ಳಲಾಗುತ್ತಿದೆ.